ಇಷ್ಟು ಕಾಲೇಜುಗಳಿಗೂ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ರವರು ಮಾನ್ಯತೆಯನ್ನು ಕೊಟ್ಟಿದ್ದಾರೆಯೆ ? ಮತ್ತೆ ಅನೇಕ ಕಾಲೇಜುಗಳಲ್ಲಿ ಕುಳಿತುಕೊಳ್ಳುವುದಕ್ಕೆ ಬೆಂಚುಗಳಿಲ್ಲ, ವಿದ್ಯಾರ್ಥಿಗಳಿಗೆ ಲ್ಯಾಬರೇಟರಿ ಇಲ್ಲ, ಸಲಕರಣೆಗಳಿಲ್ಲ. ಈ ಎಲ್ಲ ಪ್ರಶ್ನೆಗಳಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಕ್ಷಣ ಎಷ್ಟು ಕಾಲೇಜುಗಳಿಗೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ರವರು ಮಾನ್ಯತೆಯನ್ನು ಕೊಟ್ಟಿದ್ದಾರೆಂಬುದಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ. ನನಗೆ ಗೊತ್ತಿರುವ ಹಾಗೆ ಕೆಲವು ಕಾಲೇಜುಗಳಿಗೆ ಇಂಡಿಯನ್ ಮೆಡಿಕಲ್ ಕೌನಿಲ್ಸ್‌ರವರು ರೆಕಗ್ನೇಷನ್ ಕೊಟ್ಟಿಲ್ಲ. ಮತ್ತೆ ಅನೇಕ ಕಾಲೇಜುಗಳಲ್ಲಿ ಸೌಲಭ್ಯಗಳು ಅಂದರೆ ಪ್ರಯೋಗ ಶಾಲೆ ಮತ್ತು ವಿದ್ಯಾರ್ಥಿಗಳಿಗೆ ಬೇಕಾಗಿರತಕ್ಕಂಥ ಇನ್ನಿತರ ಸೌಲಭ್ಯಗಳು ಸಾಕಷ್ಟಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಾದಿರುತ್ತದೆ. ಆದರ ಬಗ್ಗೆ ಏನು ಮಾಡಬೇಕು ಎನ್ನುವುದೂ ಕೂಡ ಸರ್ಕಾರದ ಗಮನದಲ್ಲಿರುತ್ತದೆ. ಆದನ್ನು ಸರ್ಕಾರ ದವರು ಪರಿಶೀಲನೆ ಮಾಡುತ್ತಾರೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಹೆಚ್ಚಿನ ಸೀಟುಗಳನ್ನು ಯಾವ ಆಧಾರದ ಮೇಲೆ ಹೆಚ್ಚಿಸಿದಿರಿ ಎಂಬುದಕ್ಕೆ ಎಕ್ಸ್‌ಟ್ರೀನಿಯಸ್ ಕನ್‌ಸಿಡರೇಷನ್ ಬಂದುದರಿಂದ ಹೆಚ್ಚಿಸಲಾಯಿತು ಎಂದು ಹೇಳಿದ್ದೀರಿ. ತಮಗೆ ಎಕ್ಸ್‌ಟ್ರೀನಿಯಸ್ ಕನ್‌ಸಿಡರೇಷನ್ ತೋರಿಸಿ ಹೆಚ್ಚಿಗೆ ಸೀಟುಗಳನ್ನು ಪಡೆದಿರತಕ್ಕಂಥದ್ದು ಇರುತ್ತದೆ. ಇವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆ ರೀತಿ ಏನಾದರೂ ಹೆಚ್ಚಿಗೆ ಸೀಟುಗಳನ್ನು ಪಡೆದಿದ್ದರೆ ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಆದನ್ನು ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇಂಡಿಯನ್ ಮೆಡಿಕಲ್ ಕೌನಿ ಲ್‌ರವರು ಮಾನ್ಯತೆ ನೀಡದ ಕಾಲೇಜು ಗಳು ಯಾವುವು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಮೂರು ಕಾಲೇಜ್‌ಗಳಿಗೆ ಮಾನ್ಯತೆಯನ್ನು ನೀಡಿಲ್ಲ. ಅವು ಯಾವುವೆಂದರೆ ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜ್, ಡಾ।ಅಂಬೇಡ್ಕರ್ ಮೆಡಿಕಲ್ ಕಾಲೇಜ್, ಮತ್ತು ಕೆಂ ೇಗೌಡ ಮೆಡಿಕಲ್ ಕಾಲೇಜ್.ಆದರೆ ಮಾನ್ಯತೆಯನ್ನು ಕೊಡತ್ಕಂಥ ಪ್ರಪೋಸಲ್ ನಡೆಯುತ್ತಿದೆ.

ಶ್ರೀ ಪಿ. ರಾಮದೇವ್.—ಕ್ಯಾಪಿಟೇಷನ್ ಫೀಸ್‌ನ್ನು ಹಂತ ಹಂತವಾಗಿ ತೆಗೆದುಹಾಕುತ್ತೇವೆಂದೂ, ಇದು ಸರ್ಕಾರದ ನೀತಿಯಾಗಿದೆ ಎಂದು ಘೋಷಣೆ ಮಾಡಿದ್ದೀರಿ. ಸ್ವಾಮಿ ಸರ್ಕಾರದವರೆ ಸ್ಥಳೀಯ ವಿದ್ಯಾರ್ಥಿಗಳಿಗೆ 60 ಸಾವಿರ, ಹೊರಗಿನವರಿಗೆ 1 ಲಕ್ಷ 25 ಸಾವಿರ ರೂಪಾಯಿಗಳಿಂದು ಪಿಕ್ಸ್ ಮಾಡಿರುತ್ತಾರೆ. ಆದ್ದರಿಂದ ಈ ವರ್ಷ ಕಡಿಮೆ ಮಾಡಿರುವುದು ಏನಾದರೂ ಇದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟು ಐದು ವರ್ಷಗಳಲ್ಲಿ ಹಂತಹಂತವಾಗಿ ಇದನ್ನು ತೆಗೆದುಹಾಕುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಹಂತಹಂತವಾಗಿ 5 ವರ್ಷದಲ್ಲಿ ಎಂದು ಹೇಳಿರುವುದರಿಂದ ಮೊದಲನೆಯ ವರ್ಷದಿಂದಲೇ ಕಡಿಮೆಯಾಗುತ್ತದೆ.

ಮುಂಬಡ್ತಿ ಸಲುವಾಗಿ ಸೇವಾವಧಿಯನ್ನು ಕಡಿಮೆ ಮಾಡುವ ಕುರಿತು

179. ಶ್ರೀ ಕಟ್ಟೀಮುನಿ ಎ. ಕೆ. (ಮುದ್ದೇಶ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಎ) ಸರ್ಕಾರಿ ನೌಕರಿಗಳಲ್ಲಿ ಪರಿಶಿಷ್ಟ ಜಾತಿ/ಬುಡಕಟ್ಟಿನವರಿಗೆ ಮೀಸಲಾತಿಯ ಆಜ್ಞೆಯನ್ನು ಜಾರಿಗೊಳಿಸುವುದನ್ನು ಗಮನಿಸಲು ರಚಿಸಿರುವ ಉನ್ನತ ಸಮಿತಿಯು ಮಾಡಿದ ಶಿಫಾರಸಿನಂತ ಸರ್ಕಾರವು ಸೇವಾ ವಧಿ ಅರ್ಹತೆಯನ್ನು ಕಡಿಮೆಗೊಳಿಸುವ ಬಗ್ಗೆ ಯಾವುದಾದರೂ ಆಜ್ಞೆಯನ್ನು ಹೊರಡಿಸಿದೆಯೇ ;

ಬಿ) ಹಾಗಾದರೆ ಸರ್ಕಾರದ ಆಜ್ಞೆಯನ್ನು ಎಂದು ಹೊರಡಿಸಲಾಯಿತು ;

ಸಿ) ಸರ್ಕಾರದ ಈ ಆಜ್ಞೆಯನ್ನು ಸರ್ಕಾರದ ಎಷ್ಟು ಇಲಾಖೆಗಳು ಜಾರಿಗೊಳಿಸಿವೆ ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಗಳು) :—

ಎ) ಹೌದು. ಬಿ) ದಿನಾಂಕ 26-11-1982ರಂದು.

ಸಿ) ಸಾಧ್ಯವಾದ ಮಟ್ಟಿಗೆ ಪರಿಶೀಲಿಸಲಾಗಿ ಎರಡು ಇಲಾಖೆಗಳು ಈಗಾಲೇ ಕ್ರಮಗಳನ್ನು ಕಾರ್ಯರೂಪಕ್ಕೆ ತಂದಿವೆ ಮತ್ತು ಇನ್ನು ಅನೇಕ ಇಲಾಖೆಗಳು ಅವಶ್ಯವಾದ ತಿದ್ದುಪಡಿಯನ್ನು ಕೈಕೊಂಡಿವೆ ಎಂದು ತಿಳಿದು ಬಂದಿದೆ.

ಶ್ರೀ ಎ. ಕೆ. ಕಟ್ಟೀಮನಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಾಧ್ಯವಾದ ಮಟ್ಟಿಗೆ ಪರಿಶೀಲನೆ ಮಾಡಲಾಗುತ್ತದೆಂದು ಹೇಳಿರುತ್ತಾರೆ. ಸರ್ಕಾರಿ ನೌಕರಿಗಳಲ್ಲಿ ಪರಿಶಿಷ್ಟ ಜಾತಿ ಬುಡಕಟ್ಟಿನವರಿಗೆ ಮೀಸಲಾತಿಯ ಆಜ್ಞೆಯನ್ನು ಜಾರಿಗೊಳಿಸುವುದನ್ನು ಗಮನಿಸಲು ರಚಿಸಿರುವ ಉನ್ನತ ಸಮಿತಿಯು ಮಾಡಿದ ಶಿಫಾರಸಿನಂತೆ ಸರ್ಕಾರವು ಸೇವಾ ಅರ್ಹತೆಯನ್ನು ಕಡಿಮೆಗೊಳಿಸುವ ಬಗ್ಗೆ ಪರಿಶೀಲನೆ ಮಾಡುತ್ತದೆಯೇ ? ಎರಡನೆಯದಾಗಿ ಈಗಾಗಲೇ ಎರಡು ಇಲಾಖೆಗಳಲ್ಲಿ ಜಾರಿಗೆ ತಂದಿದ್ದೇವೆಂದು ಹೇಳಿರುತ್ತಾರೆ. ಅದರಂತೆ ಉಳಿದ ಎಲ್ಲಾ ಇಲಾಖೆಗಳಿಗೂ ಜಾರಿಗೆ ತರಲಿಕ್ಕೆ ಸರ್ಕಾರಕ್ಕೆ ಏನು ತೊಂದರೆ ? ಸರ್ಕಾರಿ ಆಜ್ಞೆ ಬಂದ

ನಂತರ ಪೋಲಿಸ್ ಇಲಾಖೆಯಲ್ಲಿ 31-12-82ರಲ್ಲಿ ಪ್ರಮೋಷನ್ ಕೊಟ್ಟಿರುತ್ತಾರೆ. ಹೀಗೆ ಪ್ರಮೋಷನ್ ಕೊಡುವಾಗ ಆಜ್ಞೆಯನ್ನು ಅನುಸರಿಸಿ ಕೊಟ್ಟಿರುತ್ತಾರೆಯೇ ? ಆ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—26-11-1982ರಿಂದ ಕಟ್ಟುನಿಟ್ಟಾಗಿ ಆಜ್ಞೆಯನ್ನು ಪಾಲಿಸ ಬೇಕೆಂದು ಹೇಳಿ ಎಲ್ಲಾ ಸರ್ಕಾರಿ ಕಚೇರಿಗಳಿಗೂ ತಿಳಿಸಲಾಗಿದೆ. ಕೆಲವು ಇಲಾಖೆಗಳಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ 5 ವರ್ಷ ಇದ್ದುದನ್ನು 3 ವರ್ಷಕ್ಕೆ ಇಳಿಸಲಾಗಿದೆ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಸಾಕಷ್ಟು ಅಭ್ಯರ್ಥಿಗಳು ಇಲ್ಲದಿದ್ದರೆ ಪ್ರಮೋಷನ್ ಕೊಡಬೇಕೆಂದು ತಿಳಿಸಿರುತ್ತೇನೆ. ಹಾಗೆಯೇ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮತ್ತು ಗಣಿ ಮತ್ತು ಭೂಗರ್ಭ ಇಲಾಖೆಯಲ್ಲೂ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗೆ ತಿದ್ದುಪಡಿ ಮಾಡಲಾಗಿದೆ. ಮತ್ತೆ ಪ್ರಮೋಷನ್ ಕೊಡಬೇಕಾದರೆ ಇಷ್ಟೇ ವರ್ಷ ಸರ್ವೀಸ್ ಮಾಡಬೇಕೆಂದು ರೂಲ್ಸ್ ಮಾಡಿಲ್ಲ. ಉಳಿದ ಇಲಾಖೆಗಳಿಗೂ ಪರಿಶೀಲಿಸಿ ಅದನ್ನು ಕೂಡಲೇ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಆರ್ಹ ಅಭ್ಯರ್ಥಿಗಳು ಇದ್ದು ಮೂರೇ ವರ್ಷ ಸರ್ವೀಸ್ ಆಗಿದ್ದರೂ ಕೂಡ ಪ್ರಮೋಷನ್ ಕೊಡಲು ಅವಕಾಶ ಇರುವಾಗ ಏತಕ್ಕೆ ಪ್ರಮೋಷನ್ ಕೊಡಬಾರದು ಎಂದು ಕೇಳು ತ್ತೇನೆ. ಇದನ್ನು ಸಮಗ್ರವಾಗಿ ಎಲ್ಲಾ ಇಲಾಖೆಗಳಿಗೂ ಜಾರಿಗೆ ತರದೇ ಒಂದೊಂದೇ ಇಲಾಖೆಯಲ್ಲಿ ಮಾತ್ರ ಏತಕ್ಕೆ ಮಾಡಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಇಲಾಖೆಗಳಿಗೂ ಈ ರೀತಿ ಪರಿಶೀಲನೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಕೆಲವು ಡಿಪಾರ್ಟ್‌ಮೆಂಟ್‌ನವರು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದರೆ ಕೆಲವು ಡಿಪಾರ್ಟ್‌ಮೆಂಟ್‌ನವರು ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ಆದ್ದರಿಂದ ಪ್ರಿಸಿಡೆಂಟ್ಸ್‌ನ್ನು ನೋಡಬೇಕಾಗಿರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಪ್ರಮೋಷನ್ ಕೊಡಲು ಐದು ವರ್ಷ ಅಥವ ಕನಿಷ್ಟ ಮೂರು ವರ್ಷ ಗಳಾದರೂ ಇರಬೇಕೆಂದು ಇರುತ್ತದೆ. ಐದುವರ್ಷ ಸರ್ವೀಸ್ ಆದವರು ಇಲ್ಲದಿದ್ದರೆ ಮೂರು ವರ್ಷಗಳ ಸರ್ವೀಸ್ ಆಗಿದ್ದರೂ ಆಯಾಯಾ ಇಲಾಖೆಗಳಲ್ಲಿ ಬಡ್ತಿ ಕೊಡುವುದರಲ್ಲಿ ಸರ್ಕಾರದಲ್ಲಿ ಅವಕಾಶವಿರುತ್ತದೆ. ಹೀಗಿರುವಾಗ ಐದು ವರ್ಷ ಸರ್ವೀಸ್ ಆದವರು ಸಿಕ್ಕದಿದ್ದರೆ ತತ್‌ಕ್ಷಣ ಮೂರು ವರ್ಷ ಆಗಿರುವವರಿಗೆ ಏತಕ್ಕೆ ಬಡ್ತಿಯನ್ನು ಕೊಡಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೀತಿ ಮಾಡಬೇಕೆಂದು ಸರ್ಕಾರ ಆದೇಶ ಕೊಟ್ಟಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಕೆಲವು ಇಲಾಖೆಗಳಲ್ಲಿ ಈ ರೀತಿ ಮಾಡುತ್ತಿಲ್ಲ. ಇಲಾಖೆಯವರಿಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ತಿದ್ದುಪಡಿ ಮಾಡಬೇಕಾದಂಥ ಅವಶ್ಯಕತೆಯೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಕ್ಕಾಗಿಯೇ ಒಂದು ಉನ್ನತ ಮಟ್ಟದ ಸಮಿತಿ ಇತ್ತು. ಈ ಸಮಿತಿಯನ್ನು ತಾವು ಮುಂದುವರಿಸಿಕೊಂಡು ಹೋಗುತ್ತಿದ್ದೀರಾ ಹೇಗೆ ? ಮತ್ತು ಪ್ರತಿ ಇಲಾಖೆಯಲ್ಲಿಯೂ ಈ ಮೀಸಲಾತಿ ಹುದ್ದೆಗಳನ್ನು ಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ರೆವ್ಯೂ ಮಾಡುವುದಕ್ಕೆ ಆಗಾಗ್ಗೆ ಮೀಟಿಂಗ್ ಮಾಡುತ್ತಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಈ ಕಮಿಟಿಯವರು ಕೊಟ್ಟ ವರದಿಯನ್ನು ಜಾರಿಗೆ ಸರಲು ಕ್ರಮ ತೆಗೆದುಕೊಂಡಿದ್ದೇವೆ. ಈ ವಿಚಾರದಲ್ಲಿ ರೆವ್ಯೂ ಮಾಡುವುದು ಆವಶ್ಯಕತೆ ಇದ್ದರೆ ತಮ್ಮ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ನೋಡುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈಗಾಗಲೇ ಎರಡು ಇಲಾಖೆಗಳು ಈ ಕ್ರಮಗಳನ್ನು ಕಾರ್ಯರೂಪಕ್ಕೆ ತಂದಿವೆ ಎಂದು ಹೇಳಿದ್ದೀರಿ. ಅಂದರೆ ಈ ಎರಡು ಇಲಾಖೆಗಳು ಎಷ್ಟು ಪರ್ಸೆಂಟ್ ಇಂಪ್ಲಿಮೆಂಟ್ ಮಾಡಿವೆ ಮತ್ತು ಇನ್ನುಳಿದ ಇಲಾಖೆಗಳು ಇದನ್ನು ಇಂಪ್ಲಿಮೆಂಟ್ ಮಾಡದಿದ್ದರೆ ಸಂಬಂಧಪಟ್ಟವರಿಗೆ ಉಗ್ರ ವಾದಂಥ ಶಿಕ್ಷೆ ಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಿನಾಂಕ 26-11-1982ರಂದು ಈ ಬಗ್ಗೆ ಸರ್ಕಾರದ ಆಜ್ಞೆ ಯನ್ನು ಹೊರಡಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಹೇಳಿದ್ದೇವೆ. ಒಂದು ವೇಳೆ ಯಾರಾದರೂ ಇದನ್ನು ಪಾಲನೆ ಮಾಡದಿದ್ದರೆ ಅಂತಹವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎ. ಕೆ. ಕಟ್ಟಿಮನಿ.—ಪೋಲೀಸ್ ಇಲಾಖೆಯಲ್ಲಿ ಕೊಟ್ಟಿರುವ 37 ಪ್ರಮೋಷನ್‌ಗಳ ಪೈಕಿ ಈ ಆದೇಶವನ್ನು ಅನುಸರಿಸದೇ ಇದ್ದರೆ ತಾವು ಅದನ್ನು ಮತ್ತೊಮ್ಮೆ ರೆವ್ಯೂ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ವೇಳೆ ಆ ರೀತಿ ಏನಾದರು ಈ ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದರೆ ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಕಬಿನಿ ನೀರು ಮಲಿನವಾಗಿರುವ ಬಗ್ಗೆ